ಮುನ್ನುಡಿ ಬರೆಯುತ್ತಿದ್ದ ಆ ಕಟ್ಟೆ, ಇವತ್ತು ಶಾಂತಿಯ ಧಾಮವಾಗಿತ್ತು ಅವರಿಗೆ.

ಸೇವಾ ಕಾರ್ಯದಲ್ಲಿ ತೊಡಗಿದ್ದ ಪರಪ್ಪಜ್ಜ ಊರಲ್ಲಿ ಸ್ವಚ್ಛತೆಯ ಬಗ್ಗೆ, ಸಾಕ್ಷರತೆಯ ಬಗ್ಗೆ ಪ್ರಚುರಪಡಿಸುತ್ತಿದ್ದರು. ಹಲವಾರು ವಿದ್ಯಾರ್ಥಿಗಳಿಗೆ ಸಹಾಯ ಮಾಡುತ್ತಿದ್ದರು. ಅಂತಹವರಲ್ಲಿ ವಿಶ್ವ, ಶಂಕರ, ಪಂಚಾಕ್ಷರಿಯಂತಹ ಎಷ್ಟೋ ಹುಡುಗರಿದ್ದರು. ವಿಶ್ವ ಓದಿ ವಕೀಲನಾದರೆ, ಶಂಕರ ಓದಿ ರೈತನಾಗಿದ್ದ. ಪಂಚಾಕ್ಷರಿಗೆ ಬಡತನವಿದ್ದರಿಂದ ಪರಪ್ಪಜ್ಜ ಆತನಿಗೆ ನೆರವು ನೀಡಿ, ಪದವಿ ಮಾಡಿಸಿ ತನ್ನಂತೆಯೇ ಸೇವಾ ಕಾರ್ಯದಲ್ಲಿ ತೊಡಗಿಸಿದರು. ಒಮ್ಮೆ ಪಂಚಾಯತಿ ಚುನಾವಣೆಗೆ ನಿಲ್ಲಿಸಿ ಗೆಲ್ಲಿಸಿದ್ದರು ಕೂಡ. ಆದರೆ, ಬರಬರುತ್ತ ಅಧಿಕಾರದ ದರ್ಪ, ಕೈಯಲ್ಲಿಯ ಹಣ, ಪಂಚಾಕ್ಷರಿಯನ್ನು ಪಾಪದ ಕೂಪದತ್ತ ಕೊಂಡೊಯ್ದಿದ್ದವು. ಇದನ್ನರಿತ ಪರಪ್ಪಜ್ಜ ಆತನನ್ನು ತಮ್ಮಿಂದ ದೂರ ಸರಿಸಿದ್ದರು.

ಮುಂದೆ ಮತ್ತೊಂದು ಚುನಾವಣೆ ವೇಳೆ ತನ್ನನ್ನು ಬೆಂಬಲಿಸುವಂತೆ ಪಂಚಾಕ್ಷರಿ ಪರಪ್ಪಜ್ಜನತ್ತ ಬಂದು, “ಅಜ್ಜ, ಮತ್ತ ಎಲೆಕ್ಷನ್ ಬಂದದ. ಆದ್ದರಿಂದ ನೀವ ನನ್ನ ಪರವಾಗಿ ಪ್ರಚಾರ ಮಾಡ್ರಿ, ಬೆಂಬಲ ಕೊಡ್ರಿ, ಹಿಂದಕ ನೀವ ಆರಿಸಿ ಕಳಿಸಿದ್ದಿರಿ. ಈ ಸಲಾನು ಹಂಗ ಬೆಂಬಲ ಕೊಟ್ರ ಆರಿಸಿ ಬರ್ತೀನಿ”.

“ಪಂಚಾಕ್ಷರಿ, ಆಗ ನಿನ್ನ ಹತ್ರ ಆದರ್ಶ ಅನ್ನೂದು ಇತ್ತು. ಊರಿಗೆ ಏನಾದ್ರೂ ಮಾಡುವ ಕನಸಿತ್ತು. ಹೆಚ್ಚಾಗಿ ನೈತಿಕತೆ ಇತ್ತು. ಬೆಂಬಲ ಕೊಟ್ಟ ಬೆಳೆಸಿದ್ಯ. ಈಗ ಏನ ಐತಂತ ಬಂದಿದಿ. ರೊಕ್ಕದ

